ಶ್ರೀ ಎಸ್. ಆರ್. ಬೊಮ್ಮಾಯಿ.—ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇರುವುದರಿಂದ ಮಾನ್ಯ ವಿರೋಧ ಪಕ್ಷದ ನಾಯಕರು ದಯವಿಟ್ಟು ಕುಳಿತುಕೊಳ್ಳಬೇಕು.

(ಗೌಂದಲ)

ಶ್ರೀ ಎಂ. ವೀರಪ್ಪ ಮೊಯ್ಲಿ.—ನಿಮ್ಮ ಸರ್ಕಾರದ ಈ ನೀತಿಯನ್ನು ನಾವು ಪ್ರತಿಭಟಿಸಿ ಸದನದಿಂದ ಹೊರಗೆ ಹೋಗುತ್ತಿದ್ದೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ತಾವು ಹೇಳುವುದಕ್ಕೆ ಇನ್ನೇನೂ ವಿಷಯ ಇಲ್ಲವಾದ್ದರಿಂದ ಹೊರಗೆ ಹೋಗಬಹುದ್ದಿದ್ದೀರಿ.

(ಮಾನ್ಯ ವಿರೋಧ ಪಕ್ಷದ ಸದಸ್ಯರುಗಳು ಸಭಾತ್ಯಾಗ ಮಾಡಿದರು)

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಸಭಾಧ್ಯಕ್ಷರೆ, ಈ ಮಂತ್ರಿ ಮಂಡಲದಲ್ಲಿ ಜನತೆಗೆ ವಿಶ್ವಾಸ ಇದೆಯೋ ಇಲ್ಲವೋ ಎನ್ನುವ ಬಗ್ಗೆ ಒಂದು ನಿರ್ಣಯವನ್ನು ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯ ಮುಂದೆ ಮಂಡನೆ ಮಾಡಿದರು. ಕಳೆದ ೪-೫ ತಿಂಗಳಿಂದ ಜನರು ನೆಮ್ಮದಿಯಾಗಿ ಬಾಳುವುದಕ್ಕೆ ಬಿಡದೆ ಈ ಮುಖ್ಯ ಮಂತ್ರಿಗಳ ಮಂತ್ರಿ ಮಂಡಲದ ವಿರುದ್ಧವಾಗಿ ಅಪಪ್ರಚಾರ ಮಾಡಿದವರು ವಿರೋಧಪಕ್ಷದವರು. ಅವರು ಏನು ಅಪಪ್ರಚಾರ ಮಾಡಿದ್ದರೂ ಅದನ್ನು ಸಾಬೀತು ಮಾಡಿ ತೋರಿಸುವುದಕ್ಕೆ ಅವರಿಗೆ ಇವತ್ತು ಒಂದು ಅವಕಾಶ ಸಿಕ್ಕಿತ್ತು. ಆದರೆ ಅವರು ಅದನ್ನು ಮಾಡುವುದಕ್ಕೆ ಸಾಧ್ಯವಾಗದೇ ಹೋದರು. ಇವತ್ತು ರಾಜ್ಯದ ಜನತೆಯನ್ನು, ಅಧಿಕಾರಿಗಳನ್ನೂ ಅಡ್ಡದಾರಿಗೆ ಎಳೆದಿರುವವರು ಅವರು. ಅವರು ತಪ್ಪು ಮಾಡಿದ್ದು ಏನಿತ್ತು ಅದನ್ನು ಸಭೆಯ ಮುಂದಿಡಬಹುದಿತ್ತು. ಆದರೆ ಅದೇತಕ್ಕೆ ಅವರು ಮಾಡದೆ, ರಾಜ್ಯದ ಜನತೆಗೆ ಅಪಮಾನ ಮಾಡಿದ್ದಾರೆಂದು ನಾನು ಹೇಳಬಯಸುತ್ತೇನೆ. ನಿಜವಾಗಿ ಹೇಳಬೇಕೆಂದರೆ ನಮ್ಮ ಜನತಾ ಪಕ್ಷದ ಸರ್ಕಾರ ರಾಜ್ಯದ ಅಭಿವೃದ್ಧಿಗೆ ಬಹಳ ಚೆನ್ನಾಗಿ ಕೆಲಸ ಮಾಡಿದೆ ಮತ್ತು ಮಾಡುತ್ತಿದೆ. ಆದ್ದರಿಂದ ನಮ್ಮ ಭಾರತೀಯ ಜನತಾ ಪಕ್ಷದ ಎಲ್ಲ ಜನ ಮಾನ್ಯ ಸದಸ್ಯರೂ ನಮ್ಮ ಸಂಪೂರ್ಣ ಬೆಂಬಲವನ್ನು ಈ ಸರ್ಕಾರಕ್ಕೆ ಕೊಡುತ್ತಿದ್ದೇವೆ. ಅಧಿಕಾರವನ್ನು ಕಳೆದುಕೊಂಡು ಮತ್ತೆ ಅಧಿಕಾರದ ಕುರ್ಚಿಗೆ ಏರಬೇಕೆಂಬ ಆಸೆಯಿಂದ ಕಾಯುತ್ತಿರತಕ್ಕ ವಿರೋಧಪಕ್ಷದವರ ಬಗ್ಗೆ ಈ ಸರ್ಕಾರ ಮತ್ತು ಜನತೆ ಎಚ್ಚರಿಕೆಯಿಂದ ಇರಬೇಕೆಂದು ತಮ್ಮ ಮೂಲಕ ಹೇಳಬಯಸುತ್ತೇನೆ.

† ಶ್ರೀ ವಿ. ಎಸ್. ಆಚಾರ್ಯ (ಉಡುಪಿ).—ಮಾನ್ಯ ಸಭಾಧ್ಯಕ್ಷರೆ, ನಾನು ಈ ವಿಚಾರದಲ್ಲಿ ಮಾತನಾಡುವುದಕ್ಕೆ ಹೋಗದೆ ಕೇವಲ ಒಂದೆರಡು ಮಾತುಗಳನ್ನು ಮಾತ್ರ ಹೇಳಬಯಸುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಈ ಸದನದ ಮುಂದೆ ಮಂಡಿಸಿರತಕ್ಕ ನಿರ್ಣಯಕ್ಕೆ ಮಾನ್ಯ ಸದಸ್ಯರಾದ ಯಡಿಯೂರಪ್ಪನವರೂ ತಮ್ಮ ಬೆಂಬಲವನ್ನು ಕೊಟ್ಟಿದ್ದಾರೆ ವಿರೋಧಪಕ್ಷದಲ್ಲಿರುವವರಲ್ಲಿ ಕೆಲವರು ಬಹಳ ಅನುಭವಶಾಲಿಗಳು, ಪ್ರಜಾಪ್ರಭುತ್ವದಲ್ಲಿ ಯಾವ ರೀತಿ ಆಡಳಿತ ನಡೆಸಬೇಕೆಂಬ ಬಗ್ಗೆ ಚೆನ್ನಾಗಿ ತಿಳಿದುಕೊಂಡಿರುವವರು, ಹಿಂದೆ ಸಚಿವರಾಗಿ ಅನುಭವ ಪಡೆದಿರುವವರು. ಒಳ್ಳೆಯ ಆಡಳಿತವನ್ನು ನಡೆಸಲು ಬೇಕಾದ ಒಳ್ಳೆಯ ಮಾರ್ಗದರ್ಶನ ಮಾಡುವವರೂ ಇದ್ದಾರೆ. ಆದರೆ ಅವರು ಅಂಥ ಒಳ್ಳೆಯ ಕೆಲಸವನ್ನು ಮಾಡಲಿಲ್ಲ. ಅವರು ಮಾಡಬೇಕಾದ ಕೆಲಸವನ್ನು ಬಿಟ್ಟು, ಈ ಸರ್ಕಾರ ನಾಳೆ ಬಿದ್ದು ಹೋಗುತ್ತದೆ, ನಾಡಿದ್ದು ಬಿದ್ದು ಹೋಗುತ್ತದೆ ಎಂದು ಕೇವಲ ಅಪಪ್ರಚಾರ ಮಾಡಿಕೊಂಡೇ ಬಂದರು. ಶುಮಾರು ೨೦ ದಿವಸಗಳಿಂದ ಎಲ್ಲೆಲ್ಲಿ ಏನೇನು ನಡೆಯಿತು ಎಂಬುದನ್ನೆಲ್ಲಾ ನಾನು ನೋಡಿದ್ದೇನೆ. ನಾವು ಜನರನ್ನು ಭೇಟಿ ಮಾಡಿದಾಗ Will this Government last ? ಅಂತ ಕೇಳಿದರು. ನನಗೆ ಆಗ ದಿಗ್ಭ್ರಾಂತಿಯಾಯಿತು. ಅಂದರೆ ಇಂಥ ಪ್ರಶ್ನೆಯೆನ್ನು ಸಾರ್ವಜನಿಕ ವರಿಷ್ಠರು ಕೇಳಿದರು. ಈ ಸಂದರ್ಭದಲ್ಲಿ ನನಗೆ ಒಂದು ಕಥೆ ನೆನಪಾಗುತ್ತಿದೆ. ಅದು ಏನೆಂದರೆ ಒಬ್ಬ ಭಾಲೆಂಜರ್ ಒಬ್ಬ ಜ್ಯೋತಿಷಿಯ ಹತ್ತಿರ ಹೋಗಿ ನನ್ನ ಕೈಯಲ್ಲಿ ಏನಿದೆ ಎಂಬುದನ್ನು ಹೇಳುತ್ತೀಯಾ ಎಂದು ಕೇಳಿದ. ಆಗ ಜ್ಯೋತಿಷಿಯು ನಿನ್ನ ಕೈಯಲ್ಲಿ ಬೈನಾ ಹಕ್ಕಿ ಇದೆಯೆಂದು ಹೇಳಿದ. ಆಗಾದರೆ ಈ ಹಕ್ಕಿ ಜೀವಂತ ಇದೆಯೋ, ಇಲ್ಲವೋ, ಎಂದು ಭಾಲೆಂಜರ್ ಕೇಳಿದ್ದಕ್ಕೆ ಜ್ಯೋತಿಷಿ ಸ್ವಲ್ಪ ಯೋಚನೆ

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.